ಕಾಡಾನೆಗಳು ತಿರುಗಾಡುವ ಹಾದಿಗೆ ಗಜಪಥವೆಂದು ಹೆಸರು. ಇದರಂತೆ ಕುರಿಗಾಹಿಗಳ ಅಜಪಥವಿದೆ, ಹೊಳೆ ಹರಿವ ಜಲಪಥವಿದೆ. ಹಕ್ಕಿಗಳು ವಲಸೆ ಹೋಗುವ ಗಗನಪಥವಿದೆ. ಜನ ಗಾಳಿವಿಹಾರ ಮಾಡುವ ವಾಕಿಂಗ್ ಪಥಗಳೂ ಇವೆ. ವಾಕಿಂಗ್ ಪಥಗಳಿಗಾಗಿಯೇ ನಗರಗಳಲ್ಲಿ ಮೀಸಲಾದ ಪಾರ್ಕುಗಳಿವೆ. ಸಣ್ಣಪುಟ್ಟ ಊರಿನ ಜನ ಶಾಲಾ ಮೈದಾನವನ್ನೊ, ಮನೆ ಕಟ್ಟಿರದ ಲೇಔಟುಗಳನ್ನೊ ಹುಡುಕಿಕೊಂಡಿರುವವರು. ನಮ್ಮ ಬಡಾವಣೆಯ ಭಾಗ್ಯವಿರಬೇಕು – ಬಗಲಿಗೇ ತುಂಗಭದ್ರಾ ಕಾಲುವೆಯ ಬಲದಂಡೆಯಿದೆ. ನಾನೂ ಬಾನೂ ಜತೆಗೂಡಿ ಇಲ್ಲಿ ನಿತ್ಯವೂ ನಡೆಯುತ್ತೇವೆ. ನಾತಿ ಚರಾಮಿಯ ನಮ್ಮ ದಾಂಪತ್ಯದಂತೆ ಈ ಪಥವೂ ಬೇಸರ ಬರಿಸಿಲ್ಲ. ಹಾಗೊಮ್ಮೆ ಜನಸಂದಣಿ ಹೆಚ್ಚಿ ಗಜಿಬಿಜಿ ಎನಿಸಿದರೆ, ದಂಡೆಬಿಟ್ಟು ಪಕ್ಕದ ಗದ್ದೆಯೊಳಗೆ ಹಾದಿರುವ ಜಾಡಿಗೆ ಹೊರಳುತ್ತೇವೆ. ಅಲ್ಲಿ ರೈತರು ಇಬ್ಬನಿಗೆ ತೊಯ್ದ ಕಬ್ಬನ್ನು ಕಡಿಯುತ್ತಿರುತ್ತಾರೆ. ಅಲ್ಲಿ ಹೊಮ್ಮುವ ಚರಚರ ಸದ್ದನ್ನೊ, ಕಿರುಗಾಲುವೆಗಳಲ್ಲಿ ಹರಿವ ನೀರಿನ ಚುಳಚುಳವನ್ನೊ ಆಲಿಸುತ್ತ ನಡೆಯುತ್ತೇವೆ.

ಸಮಸ್ಯೆಯೆಂದರೆ, ಈಚೆಗೆ ಬಾನು ನನ್ನ ಜೊತೆ ಬರುವುದನ್ನು ತಪ್ಪಿಸುತ್ತಿದ್ದಾಳೆ. ನಾನು ವಾಕಿಂಗಿನಲ್ಲಿರುವಾಗ ಯಾವುದೋ ಆಲೋಚನೆಯಲ್ಲಿ ಮುಳುಗಿ, ಅವಳಿರುವುದನ್ನೇ ಮರೆಯುತ್ತೇನಂತೆ. 'ನಿನ್ನಂಥ ಮೂಗನ ಜತೆ ಬರಲಾರೆ' ಎನ್ನುತ್ತಾಳೆ. ಅವಳ ತೀರ್ಮಾನ ಗೌರವಿಸುತ್ತೇನೆ. ಆದರೆ ವಾಕಿಂಗಿನುದ್ದಕ್ಕೂ ಮಾತಾಡಲು ಸಾಧ್ಯವೇ? ಮೌನವು ಬಂಗಾರದ ಬೆಲೆಯುಳ್ಳದ್ದಲ್ಲವೇ? ವಾಸ್ತವವಾಗಿ ಊರಸುದ್ದಿ ಇಟ್ಟುಕೊಂಡು ಹರಟೆ ಕೊಚ್ಚುವ ಗೆಳತಿಯರ ಜೊತೆ ಹೋಗಲು ಆಕೆ ಹೂಡಿರುವ ಹೂಟವಿದು. ಇದಾದರೂ ನನಗೆ ಅರಿವಾಗಿದ್ದು ಅವರೆಲ್ಲ ಸೇರುವ ಬೆಳಗಿನ ಸಭೆಯಲ್ಲಿ. ಈ ಸಭೆಯ ಮಾತುಕತೆಯನ್ನು ಗಿಡಗಳ ಮರೆಯಲ್ಲಿ ವ್ಯಾಯಾಮ ಮಾಡುತ್ತ ಕೇಳಿಸಿಕೊಂಡಿದ್ದೇನೆ. ಅದರ ತಿರುಳನ್ನು 'ಪತಿಗರ್ವಭಂಗ' ಅಥವಾ 'ಸತಿಮಹಿಮೆ' ಎಂದು ಕರೆಯಬಹುದು. ಜೀವನದಲ್ಲಿ ಒಟ್ಟಿಗೆ ನಡೆಯಬೇಕೆಂದು ಸಂಕಲ್ಪ ಮಾಡಿದ ಸಂಗಾತಿ ಜೊತೆಯೊಳಗಿದ್ದರೆ, ನಾವೂ ಸಿಪಾಯಿಯಂತೆ ಎದೆಸೆಟೆಸಿ ನಡೆಯಬಹುದು. ಆಗ ವಾಕಿಂಗಿಗೂ ಒಂದು ಘನತೆ–ಶೋಭೆ. ಆದರೆ ಶಿವೆಯೇ ಕಾಳಿಯ ರೂಪತಾಳಿ ಗಂಡನ ಎದೆಮೇಲೆ ನಿಂತರೇನು ಮಾಡುವುದು? ನೀರೆಯರು ಕೈಬಿಡಲು ನೀರೇ ಗತಿಯೆಂದು, ಕಾಲುವೆಯ ಜಲವನ್ನು ವೀಕ್ಷಿಸುತ್ತ ತಬ್ಬಲಿಯಂತೆ ಒಬ್ಬನೇ ಹೋಗುತ್ತಿದ್ದೇನೆ. 'ಎಕಲ ಚಲೊ' ಎಂದಿಲ್ಲವೇ ಗುರುದೇವ ರವೀಂದ್ರರು? ಒಂಟಿಯಾಗಿ ಬಂದವರು ಒಂಟಿಯಾಗೆ ತೆರಳಬೇಕೆಂದು ದಾಸರೂ ಹೇಳಿದ್ದಾರಷ್ಟೆ.

ಹೊಳೆಹಳ್ಳ ಕಾಲುವೆಯಿರಲಿ, ಅಲೆಗಳು ಕಿನಾರೆಗೆ ಬಡಿವ ಬೀಚಿರಲಿ, ನೀರಬದಿ ನಡೆಯುವುದೇ ಒಂದು ಹಿತ. ಎಷ್ಟು ದೂರ ನಡೆದರೂ ಹಾದಿ ಸವೆಯುವುದು ತಿಳಿಯುವುದಿಲ್ಲ. ಪಡುವಣದ ಮಲೆಘಟ್ಟಗಳಲ್ಲಿ ಹುಟ್ಟಿದ ನೀರು, ತನ್ನ

